(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನಾಥ ಆಶ್ರಮಗಳಿಗೆ ಅನುದಾನ ಬಿಡುಗಡೆ.

ಅಧ್ಯಕ್ಷರು :— ವಿವಿಧ ಇಲಾಖೆಗಳ ಅನುದಾನ ಬಿಡುಗಡೆ ಮಾಡುವ ವಿಷಯವಾಗಿರುವುದರಿಂದ ಈ ಪ್ರಶ್ನೆಗೆ ಉಪ ಮುಖ್ಯಮಂತ್ರಿಯವರೇ ಉತ್ತರವನ್ನು ಹೇಳುತ್ತಾರೆ.

ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) :— ಕರ್ನಾಟಕ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಘೋಷಣೆ ಮಾಡುತ್ತಿದೆ. ಆದರೆ ಈ ಘೋಷಣೆಗಳು ಯಾವ ರೀತಿ ಅಮಷ್ಠಾನಕ್ಕೆ ಬರುತ್ತಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ನನ್ನ ಜಿಲ್ಲೆಯಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅನೇಕ ಅನಾಥ ಆಶ್ರಮಗಳಿಗೆ 11 ತಿಂಗಳಿಂದ ಅನುದಾನವನ್ನು ಬಿಡುಗಡೆ ಮಾಡಿಲ್ಲ. ನಿರ್ಗತಿಕರು ಇವತಕ್ಕಂಥ ಅನಾಥ ಆಶ್ರಮಗಳನ್ನು ಹೇಗೆ ನಡೆಸಬೇಕೆಂಬುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಇನ್ನೊಂದು ಕಡೆ, ವಿಧವಾ ವೇತನ ಮತ್ತು ವೃದ್ಯಾಪ್ಯ ವೇತನ ಹಾಗೂ ಅಂಗವಿಕಲ ವೇತನವನ್ನು ಹಲವು ತಿಂಗಳುಗಳಿಂದ ಸಿಕ್ಕಿಲ್ಲ. ಈ ದುಸ್ಥಿತಿ ಸರ್ಕಾರಕ್ಕೆ ಏಕೆ ಬಂತು? ಯಾವಾಗ ಇದನ್ನು ಸರಿಪಡಿಸುತ್ತೀರಿ? ಈ ಹಣವನ್ನು ಯಾವ ಕಾರಣಕ್ಕೋಸ್ಕರ ಬಿಡುಗಡೆ ಮಾಡಿಲ್ಲ ಎಂಬುದರ ಬಗ್ಗೆ ವಿವರಗಳನ್ನು ಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ (ಹಣಕಾಸಿನ ಸಚಿವರು) :— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅನಾಥ ಆಶ್ರಮಗಳಿಗೆ ಅನುದಾನವನ್ನು ಕೊಟ್ಟಿಲ್ಲವೆಂದು ಮಾನ್ಯ ಸದ್ಯಸರು ಪ್ರಸ್ತಾಪ ಮಾಡಿದ್ದಾರೆ. ಅಲ್ಲಿಗೆ ಸುಮಾರು 3 ಲಕ್ಷ ರೂಪಾಯಿಗಳಷ್ಟು ಕೊಡಬೇಕಾಗಿದೆ. ಇದನ್ನು ಕೊಡುವುದಕ್ಕೆ ಅಲ್ಲಿ ಹಣ ಇದೆ. ಹಣವನ್ನು ಮರುಹೊಂದಾಣಿಕೆ ಮಾಡಿ ಈ ಅನಾಥ ಆಶ್ರಮಗಳಿಗೆ ಕೊಡುವುದಕ್ಕೆ ಈಗಾಗಲೇ ನಮ್ಮ ಹಣಕಾಸು ಇಲಾಖೆಯಿಂದ ಸೂಚನೆ ಹೋಗಿದೆ. ಅದನ್ನು ಈ ತಿಂಗಳ ಒಳಗಾಗಿ ಕೊಡತಕ್ಕಂಥ ವ್ಯವಸ್ಥೆಯನ್ನು ಅವರು ಮಾಡುತ್ತಾರೆ. ಒಟ್ಟು ಉಳಿದಿರತಕ್ಕಂಥ ಸುಮಾರು 20 ಲಕ್ಷ ರೂಪಾಯಿಗಳನ್ನು ಮರುಹೊಂದಾಣಿಕೆ ಮಾಡಿ, ಆಯಾಯ ಜಿಲ್ಲೆಗಳಲ್ಲಿರತಕ್ಕಂಥ ಹಣವನ್ನೂ ಕೊಡಬೇಕೆಂದು ತೀರ್ಮಾನ ಮಾಡಿ ಅಧಿಸೂಚನೆ ಕೊಡುತ್ತೇವೆ. ದಕ್ಷಿಣ ಕನ್ನಡ ಜಿಲ್ಲೆಗೆ ಸುಮಾರು 3 ಲಕ್ಷ ರೂಪಾಯಿಗಳನ್ನು ಅಲ್ಲಿಂದಲ್ಲೆ ಕೊಡತಕ್ಕಂಥ ವ್ಯವಸ್ಥೆಯನ್ನು ಅವರು ಮಾಡುತ್ತಾರೆ. ಎರಡನೇಯದಾಗಿ, ವೃದ್ಯಾಪ್ಯ ವೇತನ ಕೊಡುವುದನ್ನು ನಿಲ್ಲಿಸಲಾಗಿದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಈಗ ಉಡುಪಿ ಹೊಸ ಜಿಲ್ಲೆಯಾಗಿರುವುದರಿಂದ ಅಲ್ಲಿ ಕಂಪ್ಯೂಟರ್ ಪ್ರಿಂಟರ್ ಇಲ್ಲ. ಇದನ್ನು ಮಂಗಳೂರಿನಲ್ಲಿ ಎಂ.ಒ.ಗಳನ್ನು ಪ್ರಿಂಟ್ ಮಾಡಿ ಕಳುಹಿಸಿಕೊಡುತ್ತೇವೆ. ಈಗ ಡಿಸೆಂಬರ್‌ವರೆಗೆ ಕೊಟ್ಟಿದ್ದೇವೆ, ಜನವರಿ ಮತ್ತು ಫೆಬ್ರವರಿ ತಿಂಗಳುಗಳಿಗೆ ಪ್ರಿಂಟ್ ಆದ ಫಾರ್ಮ್‌ಗಳನ್ನು ಕೊಡಲಾಗಿದೆ, ಮಾರ್ಚ್ ಒಳಗೆ ಜನವರಿ ಮತ್ತು ಫೆಬ್ರವರಿ ತಿಂಗಳ ಹಣವನ್ನು ಕೊಡುತ್ತೇವೆ. ಇದು ಹಣಕಾಸಿನ ತೊಂದರೆಯಿಂದ ಆಗಿರತಕ್ಕಂಥದ್ದಲ್ಲ. ನಾನು ಈಗಾಗಲೇ ಹೇಳಿರುವ ಕಾರಣಕ್ಕೋಸ್ಕರ ಇದಾಗಿದೆ.